ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅ) ಸವಣೂರ ತಾಲ್ಲೂಕು ಯಲವಗಿ ಮತ್ತು ಸವಣೂರ ತಾಲ್ಲೂಕು ಹತ್ತಿಮತ್ತೂರು ಗ್ರಾಮಗಳಲ್ಲಿ ಪೊಲೀಸ್ ಉಪಠಾಣೆ ಸೃಜಿಸಲು ಪೊಲೀಸ್ ಇಲಾಖೆಯಲ್ಲಿ ಮನವಿಗಳು ಬಂದಿರುತ್ತವೆ.

ಆ) ಈ ಬಗ್ಗೆ ಇಲಾಖೆಯಿಂದ ಸರ್ಕಾರಕ್ಕೆ ಪ್ರಸ್ತಾವನೆ ಬಂದಿರುವುದಿಲ್ಲ. ಪ್ರಸ್ತಾವನೆ ಬಂದ ಕೂಡಲೇ ಪರಿಶೀಲಿಸಲಾಗುವುದು.

ಪೂರಕ ಟಿಪ್ಪಣಿ

ಹಾವೇರಿ ಜಿಲ್ಲೆಯ ಸವಣೂರ ತಾಲ್ಲೂಕಿನ ಯಲವಗಿ ಮತ್ತು ಹತ್ತಿಮತ್ತೂರು ಗ್ರಾಮಗಳಲ್ಲಿ ಪೊಲೀಸ್ ಹೊರಠಾಣೆ ಸೃಜನೆ ಕುರಿತಂತೆ ಮನವಿಗಳು ಬಂದಿದ್ದು, ಪೊಲೀಸ್ ಇಲಾಖೆಯಲ್ಲಿ ಈ ಬಗ್ಗೆ ಜಿಲ್ಲಾ ಎಸ್.ಪಿ. ರವರಿಂದ ಅಭಿಪ್ರಾಯ/ಪ್ರಸ್ತಾವನೆ ತರಿಸಲಾಗುತ್ತಿದ್ದು, ಇಲಾಖೆಯ ಪರಿಶೀಲನೆಯ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ರಸ್ತೆಗಳ ದುರಸ್ಥಿ

287 (1402) ಶ್ರೀ ಅಂಗಾರ ಎಸ್. (ಸುಳ್ಯ): ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೊಳಪಟ್ಟ ರಾಜ್ಯ ರಸ್ತೆಯಾಗಿದ್ದ ಉಪ್ಪಿನಂಗಡಿ–ಕಡಬ–ಕುಕ್ಕೆ ಶ್ರೀ ಸುಬ್ರಹ್ಮಣ್ಯ ರಸ್ತೆಯು ಕಳೆದ 30 ವರ್ಷಗಳ ಹಿಂದೆ ಡಾಂಬರೀಕರಣವಾಗಿದ್ದು, ಸದರಿ ರಸ್ತೆಯ ಎರಡೂ ಪಕ್ಕ ಹಾಗೂ ರಸ್ತೆಯಲ್ಲಿ ಹೊಂಡ ಗುಂಡಿಗಳು ಬಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗುವುದು (ವಿವರ ನೀಡುವುದು)

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು) :

ಅ) ಬಂದಿದೆ.

ಆ) 1) ಸದರಿ ಜಿಲ್ಲೆ ಘಾಟ್ ರಸ್ತೆಯ (ಉಪ್ಪಿನಂಗಡಿ ಕಡಬ ಕುಕ್ಕೆ ಶ್ರೀ ಸುಬ್ರಹ್ಮಣ್ಯ) ಕಿಮೀ. 0.00 ರಿಂದ 5.50 ರವರೆಗೆ 5.50 ಮೀಟರ್ ಅಗಲಕ್ಕೆ ರೂ.50.00 ಲಕ್ಷ ಅಂದಾಜು ವೆಚ್ಚದಲ್ಲಿ 2003–04ರಲ್ಲಿ ಡಾಂಬರೀಕರಣ ಮಾಡಲಾಗಿದೆ. (ಸಿಆರ್.ಎಫ್ ಅಡಿಯಲ್ಲಿ)

2) ಇದೇ ರಸ್ತೆಯ ಕಿಮೀ.27.80 ರಿಂದ 29.10 ರಲ್ಲಿನ ಭಾಗದಲ್ಲಿ 1.00 ಕಿಮೀ. ಉದ್ದಕ್ಕೆ ಕಡಬ ಪೇಟೆಯಲ್ಲಿ ರೂ. 10.00 ಲಕ್ಷ ವೆಚ್ಚದಲ್ಲಿ 2004–05ನೇ ಸಾಲಿನಲ್ಲಿ 3054 ಯೋಜನೆ ಯಡಿಯಲ್ಲಿ ಡಾಂಬರೀಕರಣ ಮಾಡಲಾಗಿದೆ. (5.50 ಮೀಟರ್ ಅಗಲಕ್ಕೆ) 27.40 ರಿಂದ 27.50ರಲ್ಲಿ ರಸ್ತೆ ಕುಸಿತದ ಭಾಗಕ್ಕೆ ರೂ.2.25 ಲಕ್ಷ ದುರಸ್ಥಿಗೆ ಮಂಜೂರಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ.

3) ಅಲ್ಲದೆ ಕಿಮೀ.29.00 ರಿಂದ 30.00 ವರೆಗೆ 935 ಮೀಟರ್ ಉದ್ದಕ್ಕೆ ರಸ್ತೆ ಅಗಲ ಹಾಗೂ 5.50 ಮೀಟರ್‌ಗೆ ಡಾಂಬರೀಕರಣ ಮಾಡಲು ರೂ.10.00 ಲಕ್ಷ ವೆಚ್ಚದಲ್ಲಿ 2005–06ನೇ ಅಪೆಂಡಿಕ್ಸ್–ಇ 5054 ಯೋಜನೆಯಡಿಯಲ್ಲಿ ಕೆಲಸ ಪ್ರಾರಂಭಿಸಿದೆ.

4) ಸದರಿ ರಸ್ತೆಯ ಕಿಮೀ.0.00 ರಿಂದ 32.80 ವರೆಗೆ ಗುಂಡಿಗಳನ್ನು ಮುಚ್ಚಿ ವಾಹನ ಸಂಚಾರಕ್ಕೆ ಯೋಗ್ಯವಾಗಿ ಇಡಲಾಗಿದೆ.

ಉಪ್ಪಿನಂಗಡಿ ಕಡಬ ಸುಬ್ರಹ್ಮಣ್ಯ ರಸ್ತೆಯನ್ನು 08–03–2006ರಲ್ಲಿ ರಾಜ್ಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸಿದ್ದರಿಂದ ಹಾಗೂ ಮಂಗಳೂರು ವಿಭಾಗದ ರಾಜ್ಯ ಹೆದ್ದಾರಿ ನಿರ್ವಹಣೆಯ ಕಾಮಗಾರಿಗಳನ್ನು ದಿನಾಂಕ 16–9–2005 ರಲ್ಲಿ ಪ್ರಾರಂಭಿಸಿದ್ದ ಕಾರಣ ಇದನ್ನು ರಾಜ್ಯ ಹೆದ್ದಾರಿಯ ಮೂರು ವರ್ಷಗಳ ನಿರ್ವಹಣೆಯ ಅಡಿಯಲ್ಲಿ ತೆಗೆದುಕೊಳ್ಳಲಾಗಿರುವುದಿಲ್ಲ. ಆದರೆ, ಸುಬ್ರಹ್ಮಣ್ಯ ಉಡುಪಿ ರಾಜ್ಯ ಹೆದ್ದಾರಿಯ 82.40 ಕಿಮೀ. ಉದ್ದದ ರಸ್ತೆಯನ್ನು ರೂ.145.00 ಲಕ್ಷಗಳ ಅಂದಾಜು ಮೊತ್ತದಲ್ಲಿ (2005–08) ಮೂರು ವರ್ಷದ ರಾಜ್ಯ ಹೆದ್ದಾರಿ ನಿರ್ವಹಣೆಯ ಯೋಜನೆಯು ಮಂಗಳೂರು ವಿಭಾಗದ ಪ್ಯಾಕೇಜಿನಲ್ಲಿ ನಿರ್ವಹಣೆಗಾಗಿ ತೆಗೆದುಕೊಂಡಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ.

5. ಕೆ.ಹೆಚ್.ಡಿ.ಸಿ ನೌಕರರಿಗೆ ಅನಿಯಮಿತ ನೂಲು ಪೂರೈಕೆ.

288 (1538) ಶ್ರೀ ಸಿದ್ದುಸಾವದಿ (ಜಮಖಂಡಿ): ಮಾನ್ಯ ಪ್ರವಾಸೋದ್ಯಮ, ಜವಳಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ವರ್ಷದ ಆಯವ್ಯಯದಲ್ಲಿ ಕೈಮಗ್ಗ ಅಭಿವೃದ್ಧಿ ನಿಗಮದಡಿಯಲ್ಲಿ ನೇಯ್ಗೆ ಮಾಡುವ ನೇಕಾರರಿಗೆ ಯಾವ ಯಾವ ರೀತಿ ಸೌಲಭ್ಯಗಳು ದೊರೆತಿವೆ (ಸಂಪೂರ್ಣ ವಿವರ ಒದಗಿಸುವುದು);

ಆ) ಸದರಿ ನೇಕಾರರಿಗೆ ಉದ್ಯೋಗದ ಭರವಸೆ ಇದೆಯೇ (ವಿವರ ಒದಗಿಸುವುದು) :

ಇ) ಹಾಗಿದ್ದರೂ ಕೆ.ಹೆಚ್.ಡಿ.ಸಿ. ನೇಕಾರರಿಗೆ ಕಚ್ಚಾ ಮಾಲಿನ ನೂಲಿನ) ಕೊರತೆ ಬೀಳಲು ಕಾರಣ; ಒಂದರಿಂದ ಎರಡು ತಿಂಗಳುಗಳವರೆಗೆ ಅವರಿಗೆ ನೂಲು ಪೂರೈಕೆ ಆಗದೇ ಉದ್ಯೋಗ ನಿಂತು ಉಪವಾಸ ಬೀಳುವ ಸ್ಥಿತಿ ಇದ್ದದ್ದು ಸರಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಕೈಗೊಂಡ ಕ್ರಮಗಳೇನು;

ಉ) ಕೆ.ಹೆಚ್.ಡಿ.ಸಿ.ಯು ಈಗಿನ ಹಣಕಾಸಿನ ಸ್ಥಿತಿಗತಿಯ ಬಗ್ಗೆ ಸಂಪೂರ್ಣ ವಿವರ ಒದಗಿಸುವುದು;

ಊ) ಸದರಿ ನೇಕಾರರ ಗೃಹಸಾಲ ಮನ್ನಾ ಮಾಡಲಾಗಿದೆಯೇ: ಇದನ್ನುಳಿದು ಸರ್ಕಾರದಿಂದ ಅವರ ಕುಟುಂಬಗಳಿಗೆ ದೊರೆಯುವ ಸೌಲಭ್ಯಗಳಾವುವು?

ಶ್ರೀ ಬಿ. ಶ್ರೀರಾಮುಲು (ಪ್ರವಾಸೋದ್ಯಮ ಜವಳಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) 1) 2006–07ನೇ ಸಾಲಿನ ಆಯವ್ಯಯದಲ್ಲಿ ಅಗ್ಗದರದ ಸೀರೆ ಪಂಚೆ ಯೋಜನೆಯಡಿ ರೂ.2.00 ಕೋಟಿಗಳ ಅನುದಾನವನ್ನು ಸರ್ಕಾರವು ಒದಗಿಸಿದೆ. ಈ ಮೊತ್ತದಿಂದ